ಪ್ರಜಾವಾಣಿ

# ಜೈನ್ ಕಾಲೇಜಿನಲ್ಲಿ ಉಚಿತ ಸಲಹಾ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶೈಕ್ಷಣಿಕ ಸಂಸ್ಥೆಗಳು ಸಾಮಾಜಿಕ ಕಾರ್ಯಗಳಿಗೆ ಒತ್ತು ನೀಡುತ್ತಿರುವುದು ಮಹತ್ವದ ಬೆಳವಣಿಗೆ' ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ಅಭಿಪ್ರಾಯಪಟ್ಟರು.

ಜೈನ್ ವಿಶ್ವವಿದ್ಯಾಲಯವು ಜೆ.ಸಿ ರಸ್ತೆಯಲ್ಲಿರುವ ಜೈನ್ ಕಾಲೇಜಿನಲ್ಲಿ ಮಂಗಳವಾರ ಏರ್ಪಡಿಸಿದ್ದ ಸಮಾರಂಭದಲ್ಲಿ 'ಕಲರವ' ಮಾನಸಿಕ ಸಲಹಾ ಕೇಂದ್ರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜಿನ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ. ಶೈಲಜಾ ಶಾಸ್ತ್ರಿ ಮಾತನಾಡಿ, ಸಾರ್ವಜನಿಕರು ಉಚಿತವಾಗಿ ಇದರ ಸೇವೆ ಪಡೆಯಬಹುದು. ಮನಃಶಾಸ್ತ್ರ ವಿದ್ಯಾರ್ಥಿಗಳ ಪಠ್ಯೇತರ ಚಟುವಟಿಕೆಗಳಿಗೆ ಕೇಂದ್ರವು ವೇದಿಕೆ ಒದಗಿಸಲಿದೆ ಎಂದರು.

ಜೈನ್ ವಿಶ್ವವಿದ್ಯಾಲಯದ ಕುಲಪತಿ ಎನ್.ಸುಂದರ್ ರಾಜನ್ ಉಪಸ್ಥಿತರಿದ್ದರು.



ಜೈನ್ ಕಾಲೇಜಿನಲ್ಲಿ ಮಂಗಳವಾರ 'ಕಲರವ' ಮಾನಸಿಕ ಸಲಹಾ ಕೇಂದ್ರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಕೇಂದ್ರದ ಮೇಲ್ವಿಚಾರಕಿ ಪ್ರೊ.ಶರಿನ್.ಪಿ ಅಂಥೋನಿ ಅವರು ಆರೋಗ್ಯ ಸಚಿವ ಯು.ಟಿ.ಖಾದರ್ ಅವರಿಗೆ ವಿವರಣೆ ನೀಡಿದರು. ಜೈನ್ ವಿಶ್ವವಿದ್ಯಾಲಯದ ಕುಲಪತಿ ಸುಂದರ್ ರಾಜನ್, ಕಾಲೇಜಿನ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಶೈಲಜಾ ಶಾಸ್ತ್ರಿ ಮತ್ತು ಇತರರು ಚಿತ್ರದಲ್ಲಿದ್ದಾರೆ —ಪ್ರಜಾವಾಣಿ ಚಿತ್ರ